148th, ಕ್ರ.ಸಂ. 12

ಶ್ರೀ ಪ್ರಕಾಶ ಕೆ. ರಾಠೋಡ ವಿರೋಧ ಪಕ್ಷದ ಮುಖ್ಯ ಸಚೇತಕರು, ಕರ್ನಾಟಕ ವಿಧಾನ ಪರಿಷತ್ತು ಇವರು ಪ್ರಶ್ನೆಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಬೆಳಗಾವಿ ಜಿಲ್ಲೆಯ ಕಾಗವಾಡ ತಾಲ್ಲೂಕಿನ ಶಹಾಪೂರ ಗ್ರಾಮದಲ್ಲಿ 2019ರಲ್ಲಿ ಉಂಟಾದ ನೆರೆ ಹಾವಳಿಯಿಂದ ನದಿ ಪಾತ್ರದ ಜನರ ಜೀವನ ಬೀದಿ ಪಾಲಾಗಿದ್ದು, ಮನೆಗಳು ಹಾಳಾಗಿದ್ದು, ಅತಿವೃಷ್ಟಿಯಿಂದ ಬಿದ್ದ ಮನೆಗಳ ಸಮೀಕ್ಷೆಯನ್ನು ಸರ್ಕಾರವು ಮಾಡಿದ್ದು, ಅದರಲ್ಲಿ 'ಬಿ' ಎಂದು ನಮೂದಿಸಲಾಗಿತ್ತು. ನಂತರದ ದಿನಮಾನಗಳಲ್ಲಿ ಅದೇ ಮನೆಗಳನ್ನು 'ಸಿ' ಎಂದು ನಮೂದಿಸಿರುತ್ತಾರೆ. ಈ ಭಾಗದ ಮನೆಗಳು ಬಿದ್ದು, 'ಬಿ' ಎಂದು ನಮೂದಿಸಿರುವ ಮನೆಗಳಿಗೆ ರೂ. 5.00 ಲಕ್ಷಗಳನ್ನು ನೀಡಬೇಕಾಗಿರುತ್ತದೆ. ಆದರೆ, ಅಧಿಕಾರಿಗಳು ಮೊದಲು ನಮೂದಿಸಿದ್ದ "ಬಿ" ಯನ್ನು ಬದಲಾವಣೆ ಮಾಡಿ, "ಸಿ" ಎಂದು ನಮೂದಿಸಿರುತ್ತಾರೆ. ಸರ್ಕಾರವು ಇದುವರೆಗೂ ಯಾವುದೇ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ. ಸಂತ್ರಸ್ತ ಜನರಿಗೆ 2019ರ ಸಮೀಕ್ಷೆಯ ಪ್ರಕಾರ "ಬಿ" ಎಂದು ನಮೂದಿಸಿರುವಂತೆ ಹಣ ಬಿಡುಗಡೆ ಮಾಡುವ ವಿಚಾರದ ಕುರಿತು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಸಯಕ್ಕೆ ಕಂದಾಯ ಸಚಿವರ ಉತ್ತರ .

******

ಕಾಗವಾಡ ತಾಲೂಕಿಗೆ ಸಂಬಂಧಿಸಿದಂತೆ ಒಟ್ಟು ಎ ವರ್ಗದಲ್ಲಿ 229, ಬಿ ವರ್ಗದಲ್ಲಿ 570 ಹಾಗೂ ಸಿ ವರ್ಗದಲ್ಲಿ 1483 ಹೀಗೆ ಒಟ್ಟು 2282 ಮನೆಗಳಿಗೆ ಒಟ್ಟು 47.36 ಕೋಟಿಗಳನ್ನು ನೆರೆ ಸಂತ್ರಸ್ಥರ ಖಾತೆಗೆ ಸಂದಾಯ ಮಾಡಲಾಗಿದೆ.

ಈ ಪೈಕಿ ಕಾಗವಾಡ ತಾಲೂಕಿನ ಶಹಾಪೂರ ಗ್ರಾಮದಲ್ಲಿ ಸನ್ 2019 ರಲ್ಲಿ ಕೃಷ್ಣಾ ನದಿ ಪ್ರವಾಹದಿಂದ ನೆರೆ ಸಂತ್ರಸ್ಥರಿಗೆ ಈಗಾಗಲೇ 'ಎ' ವರ್ಗದಲ್ಲಿ 5 ಫಲಾನುಭವಿಗೆ, 'ಬಿ' ವರ್ಗದಲ್ಲಿ 49 ಫಲಾನುಭವಿಗಳಿಗೆ ಹಾಗೂ 'ಸಿ' ವರ್ಗದಲ್ಲಿ 73 ಫಲಾನುಭವಿಗಳಿಗೆ ಒಟ್ಟು ರೂ 3,06,50,000/- ಪರಿಹಾರಧನವನ್ನು ಸಂತ್ರಸ್ಥರಿಗೆ ನೇರವಾಗಿ ಫಲಾನುಭವಿಗಳ ಉಳಿತಾಯ ಖಾತೆಗೆ ಜಮಾ ಮಾಡಲಾಗಿರುತ್ತದೆ.

2019 ನೇ ಸಾಲಿನಲ್ಲಿ ಅಗಷ್ಟ ತಿಂಗಳಿನಲ್ಲಿ ಆರ್.ಜಿ.ಆರ್.ಎಚ್.ಸಿ.ಎಲ್ ತಂತ್ರಾಂಶದ ಲಾಗಿನ್ ಸ್ಥಗಿತಗೊಂಡಿರುವುದರಿಂದ, ಸದರಿ ಸಮಯದಲ್ಲಿ ಶಹಾಪೂರ ಗ್ರಾಮದ ನೆರೆ ಸಂತ್ರಸ್ಥರ ಅಗತ್ಯವಾದ ದಾಖಲೆಗಳನ್ನು ನೀಡದೇ ಇರುವ ಕಾರಣಗಳಿಂದ ತಂತ್ರಾಂಶದಲ್ಲಿ ಅಳವಡಿಸಲು 'ಬಿ' ವರ್ಗದ 65 ಫಲಾನುಭವಿಗಳು ಬಾಕಿ ಉಳಿದುಕೊಂಡಿದ್ದು ಅವುಗಳನ್ನು ಸೆಪ್ಟೆಂಬರ್ ತಿಂಗಳಲ್ಲಿ ತಂತ್ರಾಂಶದಲ್ಲಿ ಅಳವಡಿಸಲಾಗಿತ್ತು .

ಮುಂದುವರೆದು ಸೆಪ್ಟೆಂಬರ್ ತಿಂಗಳಲ್ಲಿ ಮತ್ತೆ ಅತೀಯಾದ ಮಳೆ ಸುರಿದ ಕಾರಣ ಸರ್ಕಾರದಿಂದ ಸೆಪ್ಟೆಂಬರ್ ತಿಂಗಳಲ್ಲಿ ಮನ: ಪ್ರವಾಹ ಪೀಡಿತ ತಾಲೂಕುಗಳನ್ನು ಘೋಷಣೆ ಮಾಡಲಾಯಿತು. ಸದರಿ

ಆದೇಶದಲ್ಲಿ ಕಾಗವಾಡ ತಾಲೂಕನ್ನು ಪ್ರವಾಹಪೀಡಿತ ತಾಲುಕು ಎಂದು ಘೋಷಣೆ ಮಾಡದ ಕಾರಣ ಆರ್.ಜಿ.ಆರ್.ಆರ್. ಎಚ್.ಸಿ.ಎಲ್ ತಂತ್ರಾಂಶದಲ್ಲಿ ದಾಖಲಿಸಿದ ಪ್ರಕರಣಗಳನ್ನು ರದ್ದುಪಡಿಸಲಾಗಿತ್ತು.

ಮಾನ್ಯ ಮುಖ್ಯ ಮಂತ್ರಿಗಳು ಜಿಲ್ಲಾಧಿಕಾರಿಗಳೊಂದಿಗೆ ನಡೆಸಿದ ಪರಿಶೀಲನಾ ಸಭೆಯಲ್ಲಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಜಂಟಿ ಸಮೀಕ್ಷೆಯನುಸಾರ ಎ ಬಿ ಸಿ ವರ್ಗದಲ್ಲಿ ಹಾನಿಯಾಗಿದ್ದಲ್ಲಿ ಪರಿಶೀಲಿಸಿ ತಂತ್ರಾಂಶದಲ್ಲಿ ಅಳವಡಿಸುವಂತೆ ನಿರ್ದೇಶನ ನೀಡಿರುತ್ತಾರೆ. ಅದರನುಸಾರ ಬಾಕಿ ಉಳಿದ ಪ್ರಕರಣಗಳ ಪ್ರಸ್ತಾವಣೆ ಸಲ್ಲಿಸುವ ಪೂರ್ವದಲ್ಲಿ ಸಂಬಂಧಿಸಿದ ಉಪವಿಭಾಗಾಧಿಕಾರಿಗಳು ಪ್ರಕರಣವಾರು ಕಂದಾಯ, ಪಿಡಿಒ ಹಾಗೂ ಕಿರಿಯ ಅಭಿಯತರುಗಳ ಜಂಟಿ ಸಮೀಕ್ಷೆ ವರದಿಯನ್ನು ಕುಲಂಕುಶವಾಗಿ ಪರಿಶೀಲಿಸಿ ಶಹಾಪೂರ ಗ್ರಾಮದ ಒಟ್ಟು 'ಬಿ' ವರ್ಗದಲ್ಲಿ 65 ಫಲಾನುಭವಿಗಳ ಹಾನಿಯಹೆ ಪ್ರಮಾಣವು ಕಡಿಮೆ ಇದ್ದ ಕಾರಣ ಸದರಿ ಪ್ರಕರಣಗಳನ್ನು 'ಸಿ' ವರ್ಗಕ್ಕೆ ಬದಲಾವಣೆ ಮಾಡಿರುತ್ತಾರೆ ಅದರಂತೆ ಖಜಾನೆ 2 ತಂತ್ರಾಂಶದ ಮೂಲಕ ಪರಿಹಾರ ನೀಡುವ ಕಾರ್ಯ ಪ್ರಗತಿಯಲ್ಲಿದೆ.

ಕಂಇ 532 ಟಿಎನ್ಆರ್ 2022

(ಆರ್. ಅಶೋಕ)
ಕಂದಾಯ ಸಚಿವರು.